## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ, ತಿಪಟೂರು.

## ಸಿ.ಸಿ.ನಂ. 3702/2022

ಪಿರ್ಯಾದುದಾರರು: ಜಿ.ಎಲ್.ಬಸವರಾಜು,

ವಿರುದ್ಧ

ಆರೋಪಿ : ಮಂಜುನಾಥ.ಡಿ.ಬಿ. ಬಿನ್ ಬೆಟ್ಟರಂಗಯ್ಯ.,
38 ವರ್ಷ, ಧರ್ಮೇಗೌಡನಪಾಳ್ಯ,
ನೆಲ್ಲಿಕೆರೆ ಅಂಚೆ, ನೊಣವಿನಕೆರೆ ಹೋಬಳಿ,
ತಿಪಟೂರು ತಾಲ್ಲೂಕು.

### ಆರೋಪಣೆ

ಶ್ರೀ.ಮಹಮ್ಮದ್ಆರಿಫುಲ್ಲ.ಸಿ.ಎಫ್., ಬಿ.ಎಸ್ಸಿ, ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ತಿಪಟೂರು ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ವಿರುದ್ಧ ಮಾಡುತ್ತಿರುವ ಆರೋಪಣಾ ಸಾರಾಂಶವೇನೆಂದರೆ:

ಮೇಲ್ಕಂಡ ಆರೋಪಿಯಾದ ನೀವು ಪಿರ್ಯಾದಿಯವರಿಂದ ದಿನಾಂಕಃ14.02.2022 ರಂದು ರೂ.**6,00,000/-** ಗಳನ್ನು 1 ತಿಂಗಳ ಒಳಗಾಗಿ ಮರುಪಾವತಿಸುವುದಾಗಿ ತಿಳಿಸಿ ಸಾಲವಾಗಿ ಪಡೆದಿದ್ದು, ಸದರಿ ಸಾಲದ ತೀರುವಳಿ ಸಲುವಾಗಿ ತಿಪಟೂರು, ನೊಣವಿನಕೆರೆ ಶಾಖೆಯ, ಕರ್ನಾಟಕ ಬ್ಯಾಂಕಿನ ದಿಃ **14.03.2022** ರ ಚೆಕ್ ನಂ.**038159** ನ್ನು ರೂ.**6,00,000/-** ಗಳಿಗೆ ಪಿರ್ಯಾದಿಯವರಿಗೆ ವಿತರಿಸಿದ್ದು, ನಂತರ ಪಿರ್ಯಾದಿಯವರು ಸದರಿ ಚೆಕ್ಕನ್ನು ತಿಪಟೂರು ಶಾಖೆಯ, ಎಸ್.ಬಿ.ಐ. ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ಚೆಕ್ ದಾರರ ಖಾತೆಯಲ್ಲಿ ಸಾಕಷ್ಟು ಹಣ ಲಭ್ಯವಿಲ್ಲ **(Funds insufficient)** ಎಂದು ತಿಳಿಸಿ ದಿಃ **17.03.2022** ರಂದು ಹಿಂಬರಹದೊಂದಿಗೆ ಸದರಿ ಚೆಕ್ಕನ್ನು ಪಿರ್ಯಾದಿಗೆ ಹಿಂದಿರುಗಿಸಿದ್ದು, ತದನಂತರ

ಪಿರ್ಯಾದುದಾರರು ಅವರ ವಕೀಲರ ಮೂಲಕ ದಿಃ **04.04.2022** ರಂದು ನೊಂದಾಯಿತ ಅಂಚೆ ಮೂಲಕ ಆರೋಪಿಯಾದ ನಿಮಗೆ ಹಣ ತಗಾದೆ ಮಾಡಿ ನೋಟೀಸ್ ನ್ನು ಕಳುಹಿಸಿದ್ದು, ಸದರಿ ನೋಟೀಸ್ ದಿನಾಂಕಃ **13.04.2022** ರಂದು ಜಾರಿಯಾಗದೆ Address 7 days absent ಎಂಬ ಷರಾದೊಂದಿಗೆ ಹಿಂದೆ ಬಂದಿರುತ್ತದೆ. ಅದಾದ ನಂತರವೂ ಸಹ ಆರೋಪಿಯಾದ ನೀವು ಪಿರ್ಯಾದಿಗೆ ಸಾಲದ ಹಣವನ್ನು ಮರುಪಾವತಿಸಿರುವುದಿಲ್ಲ ಹಾಗೂ ಆರೋಪಿಯಾದ ನೀವು ಪಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಚೆಕ್ಕನ್ನು ಪಿರ್ಯಾದಿ ಪರವಾಗಿ ವಿತರಿಸಿದ್ದು, ಸದರಿ ನಿಮ್ಮ ಕೃತ್ಯವು ವ್ಯವಹರಣೀಯ ಲಿಖಿತಗಳ ಅಧಿ ನಿಯಮ ಕಲಂ. **138** ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿರುತ್ತದೆ ಎಂದು ನಿಮ್ಮ ಮೇಲೆ ಆರೋಪಿಸಲಾಗಿದೆ.

## ಆರೋಪಿಯ ಹೇಳಿಕೆ

ಪ್ರಶ್ನೆ:1) ಇದೀಗ ಓದಿ ಹೇಳಿದ ಆರೋಪಣಾ ಸಾರಾಂಶವು ನಿಮಗೆ ಅರ್ಥವಾಯಿತೇ?
ಉತ್ತರ:-

ಪ್ರಶ್ನೆ:2) ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?
ಉತ್ತರ:-

(ದಿನಾಂಕ: **17.02.2023** ರಂದು ತೆರೆದ ನ್ಯಾಯಾಲಯದಲ್ಲಿ ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ್ದು, ಮೇಲಿನ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳನ್ನು ಪಡೆದು ಯಥಾವತ್ತಾಗಿ ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

(ಮಹಮ್ಮದ್ ಆರಿಪುಲ್ಲ.ಸಿ.ಎಫ್.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,
ತಿಪಟೂರು